ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : ೧೮೧೧ (೨೪೦೨)

ಸದಸ್ಯರ ಹೆಸರು : ಶ್ರೀ ಬಾಲರಾಜ್. ಎಸ್ (ಕೊಳ್ಳೇಗಾಲ)

ಉತ್ತರಿಸುವವರು : ಶ್ರೀ ಎಸ್ ಯಡಿಯೂರಪ್ಪ (ಉಪ ಮುಖ್ಯ ಮಂತ್ರಿಗಳು)

ಪ್ರಶ್ನೆ

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಗೆ ನೀರಿರುವ ಕೆರೆಗಳೆಷ್ಟು ? ನಿರ್ವಹಿಸುತ್ತಿರುವ ಯೋಜನೆಗಳಾವುವು ;

ಆ) ೨೦೦೬-೦೭ ನೇ ಸಾಲಿನಲ್ಲಿ ಈ ಇಲಾಖೆಗೆ ನೀಡಿರುವ ಅನುದಾನವೆಷ್ಟು ? ಈ ಅನುದಾನವನ್ನು ಯಾವ ಯಾವ ಯೋಜನೆಗಳಿಗೆ ಉಪಯೋಗಿಸಲಾಗಿದೆ. (ಕ್ಷೇತ್ರವಾರು ವಿವರ ನೀಡುವುದು) ;

ಇ) ಇಲಾಖೆಯಿಂದ ಸಮರ್ಪಕವಾಗಿ ಕೆಲವರು ಆಗುತ್ತಿಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಈ) ಬೃಹತ್ ನೀರಾವರಿ ಇಲಾಖೆಗೆ ಸಣ್ಣ ನೀರಾವರಿ ಇಲಾಖೆಯನ್ನು ನೀರಾವರಿ ಇರುವ ಭಾಗದಲ್ಲಿ ವೀಲಿನ ಗೊಳಿಸುವುದರಿಂದ ಕೆಲಸ ಸುಗಮವಾಗುವುದರ ಬಗ್ಗೆ ಸರ್ಕಾರ ಗಮನ ಹರಿಸಿದೆಯೇ;

ಉ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರ ತೆಗೆದುಕೊಂಡಿರವ ಕ್ರಮಗಳೇನು ?

ಉತ್ತರ

ಅ) ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಒಟ್ಟು ೩೫೯೬ ಕೆರೆಗಳಿವೆ. ಇಲಾಖೆಯಲ್ಲಿ ಏತ ನೀರಾವರಿ ಯೋಜನೆ, ಪಿಕಪ್ ಅಣೆಕಟ್ಟು ಮತ್ತು ಚೆಕ್ ಡ್ಯಾಂ, ಬಾಂದಾರ, ಬ್ಯಾರೇಜು ಮತ್ತು ಬಿಸಿಬಿ, ಕಿಂಡಿ ಅಣೆಕಟ್ಟು ಕೆರೆಗಳ ಹೊಳೆತ್ತುವಿಕೆ ಇತ್ಯಾದಿ ಯೋಜನೆಗಳಿವೆ.

ಆ) ೨೦೦೬-೦೭ನೇ ಸಾಲಿನ ಅಯವ್ಯಯದಲ್ಲಿ ಸಣ್ಣ ನೀರಾವರಿ ಇಲಾಖೆಗೆ ನಿಗದಿಪಡಿಸಿದ ಅನುದಾನದ ವಿವರ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಲೆಕ್ಕಶೀರ್ಷಿಕೆ	ಮೊತ್ತ	೧ನೇ ಪೂರಕ ಅನುದಾನ	ಒಟ್ಟು ಮೊತ್ತ
೧	೪೭೦೨ (ಯೋಜನೆ) ಮತ್ತು ೪೭೧೧ (ಯೋಜನೆ)	೫೬೭೮೧.೮೪	೨೮೪೬.೦೦	೫೯೬೨೭.೮೪
೨	೨೭೦೨ (ಯೋಜನೇತರ)	೪೦೬೫.೪೭	೮೦೦.೦೦	೪೮೬೫.೪೭
೩	೨೭೦೧, ೨೭೧೧, ೩೦೫೪ (ಯೋಜನೇತರ)	೫೮೫.೯೩	೦.೦೦	೫೮೫.೯೩
	ಒಟ್ಟು	**೬೧೪೪೩.೨೪**	**೩೬೪೬.೦೦**	**೬೫೦೯.೨೪**

ಈ ಅನುದಾನವನ್ನು ಸುಮರು ೩೦೦೦ ಕ್ಕೂ ಮೇಲ್ಪಟ್ಟ ಯೋಜನೆಗಳಿಗೆ ಉಪಯೋಗಿಸಲಾಗಿದೆ. ಕ್ಷೇತ್ರವಾರು ಯೋಜನೆಗಳ ವಿವರಗಳು ಮುಖ್ಯ ಇಂಜಿನಿಯರ್ ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ಹಾಗೂ ಉತ್ತರ ವಲಯ, ಬಿಜಾಪುರ ಇವರಲ್ಲಿ ಲಭ್ಯವಿದೆ.

ಇ) ಬಂದಿರುವುದಿಲ್ಲ.

ಈ) ಕರ್ನಾಟಕ ಆಡಳಿತ ಸುಧಾರಣಾ ಆಯೋಗದ ವರದಿಯಲ್ಲಿ ಸಣ್ಣ ನೀರಾವರಿ ಇಲಾಖೆಯನ್ನು ಭಾರಿ ಮತ್ತು ಮಧ್ಯಮ ನೀರಾವರಿ ಇಲಾಖೆಯಲ್ಲಿ ವಿಲೀನಗೊಳಿಸಲು ಶಿಫಾರಸ್ಸು ಮಾಡಲಾಗಿದ್ದು, ಈ ಬಗ್ಗೆ ಸಮಗ್ರವಾಗಿ ಪರಿಶೀಲಿಸಿ ಸರ್ಕಾರವು ಈ ಶಿಫಾರಸ್ಸನ್ನು ತಿರಸ್ಕರಿಸಿರುತ್ತದೆ.

ಉ) ಉದ್ಭವಿಸುವುದಿಲ್ಲ.